**:: COMPROMISE DECREE BEFORE LOK ADALATH ::**

**IN THE COURT OF THE SENIOR CIVIL JUDGE AND J.M.F.C. H.D.KOTE**

**O.S. NO: 269/2025**

ವಾದಿ **:** ಶ್ರೀ.ಪುಟ್ಟೇಗೌಡ ಬಿನ್ ಶಿವಣ್ಣ,
ವಯಸ್ಸು ಸುಮಾರು 46 ವರ್ಷ,
ವಾಸ :- ಹುಂಡಿಮಾಳ ಬಿಲ್ಡಿಂಗ್ ಗ್ರಾಮ,
ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

(By Smt. M. B., Advocate)

ವಿರುದ್ಧ

ಪ್ರತಿವಾದಿ**:** ಷಣ್ಮುಗಸ್ವಾಮಿ ಅಲಿಯಾಸ್ ಷಣ್ಮುಖಸ್ವಾಮಿ ಎಸ್ ಸಿ
ಬಿನ್ ಲೇಟ್ ಚನ್ನಪ್ಪಚಾರ್
ವಯಸ್ಸು ಸುಮಾರು ವರ್ಷ,
ವಾಸಃ ನಂ.415, 13 ನೇ ಕ್ರಾಸ್
ರಾಮಕೃಷ್ಣ ನಗರ, ಜಿ ಬ್ಲಾಕ್,
ಮೈಸೂರು ಸಿಟಿ, ಮೈಸೂರು ಜಿಲ್ಲೆ.

( Sri.K.P.R., Advocate for Defendant)

**SUIT FILED ON:18.12.2025**

**Suit claim:** The plaintiff most humbly prays that this honorable court be pleased to pass a judgment and decree in favour of the plaintiff and against the defendants for specific performance of contract-

a. direct the defendants receive the balance amount of Rs.

1,00,000/- (Rs. one lakh only) to execute regular sale deed before sub-registrar, H.D.Kote and to handed over the suit schedule property.

b. if the defendants fails to execute regular sale deed this honorable court was pray kindly be appointed court commissioner for executing sale deed, to grant such other reliefs as the honorable court deems fit to grant under the circumstances of the case, in the interest of justice and equity.

Plaintiff, defendants and their respective counsels have filed a Compromise petition on 14.03.2026 before this court. Hence this case came before the Lok-Adalath on $14^{th}$ day of March, 2026 for final disposal in the presence of **Judicial conciliator Sri. Mahesh B.T., B.com., LLM., Senior Civil Judge & J.M.F.C, H.D.Kote**, and **non-judicial conciliator Sri Kumar** in the presence of Sri. **M.B., advocate for the plaintiff** and **Sri K.P.R., advocate for the defendant** The following order was passed.

The case is called before Lok-adalath. Parties and their respective counsels are present and have settled the matter amicably and filed a compromise petition U/O 23 Rule 3 of CPC and its contents are read over and explained to the parties in the language known to them and have agreed and accepted the terms and conditions of the compromise

petition which seems to be lawful and voluntarily one. Therefore, the compromise petition is accepted and the suit is decreed in terms of compromise petition.

ದಿವಾನಿ ಪಕ್ರಿಯಾ ಸಂಹಿತೆ ಆದೇಶ **23** ನಿಯಮ **3** ರ ರೀತ್ಯಾ ಸಲ್ಲಿಸಲಾದ ಅರ್ಜಿ**.**
ವಾದಿ ಮತ್ತು ಪ್ರತಿವಾದಿಯು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ,

ವಾದಿಯ ಪ್ರತಿವಾದಿಯು ವಿರುದ್ಧ ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ನಿರ್ಧಿಷ್ಟಕರಾರು ಅಧಿನಿಯಮದಡಿಯಲ್ಲಿ ಪರಿಹಾರ ಕೋರಿ ಮೇಲ್ಕಂಡ ದಾವೆಯನ್ನು ಹೂಡಿರುತ್ತಾರೆ.

ಗ್ರಾಮದ ಹಿರಿಯರು ಮತ್ತು ಒತ್ಕೈಷಿಗಳ ಸಲಹೆ ಮೇರೆಗೆ ವಾದಿ ಮತ್ತು ಪ್ರತಿವಾದಿಯು ರಾಜಿ ಸಂಧಾನದ ಮೂಲಕ ಪ್ರಕರಣವನ್ನು ಇತ್ಯರ್ಥ ಪಡಿಸಿಕೊಳ್ಳಲು ಒಪ್ಪಿಕೊಂಡಿರುತ್ತಾರೆ.

ದಾವಾ ಷೆಡ್ಯೂಲ್ ಸ್ವತ್ತು ಪ್ರತಿವಾದಿಗೆ ಪಿತ್ರಾರ್ಜಿತ ಸ್ವತ್ತಾಗಿದ್ದು, ಸರ್ವೆ ನಂ. 50 ರಲ್ಲಿನ ಒಟ್ಟು ವಿಸ್ತೀರ್ಣ 1171.28 ಎಕರೆ ಜಮೀನಿನ ಪೈಕಿ ಪ್ರತಿವಾದಿಯ ಹೆಸರಿನಲ್ಲಿರುವ 2-00 ಎಕರೆ ಜಮೀನಿಗೆ ಸಂಬಧಿಸಿದಂತೆ ಗೌರವಾನ್ವಿತ ಘನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೆಚ್.ಡಿ.ಕೋಟೆಯಲ್ಲಿ ಅಸಲು ದಾವಾ 269/2025 ರ ರೀತ್ಯಾ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣವನ್ನು ಪ್ರತಿವಾದಿ ರಾಜೀ ಮೂಲಕ ನ್ಯಾಯಾಲಯದಲ್ಲಿ ದಾವೆಯನ್ನು ಇತ್ಯರ್ಥ ಪಡಿಸಿಕೊಂಡಿದ್ದು, ಸದರಿ ರಾಜೀಯ ರೀತ್ಯಾ ಷೆಡ್ಯೂಲ್ ಸ್ವತ್ತು ಪ್ರತಿವಾದಿಯ ಭಾಗಕ್ಕೆ ಸೇರಿದ ಸ್ವತ್ತಾಗಿರುತ್ತದೆ.

ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯು ದಿನಾಂಕ 21-08-2025 ರಂದು 1 ನೇ ಪುಸ್ತಕದ ದಸ್ತಾವೇಜು ನಂಬರ್ ಎಂ.ವೈ.ಎನ್-1-05164-

2025-26 ರಂತೆ ಉಪನೋಂದಣಾಧಿಕಾರಿಗಳವರ ಕಛೇರಿ ಮೈಸೂರು ಉತ್ತರ, ಇಲ್ಲಿ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಪ್ರತಿವಾದಿಯು ವಾದಿಯ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ವಾದಿಯ ಹೆಸರಿಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತನ್ನು ಪ್ರತಿವಾದಿಯು ವಾದಿಯಿಂದ ತಮ್ಮ ದರದ್ದು ನಿಮಿತ್ತ ಅಂದರೆ ಗೃಹಕೃತ್ಯದಖರ್ಚಿಗಾಗಿ ಮತ್ತು ಕೈ ಸಾಲ ತೀರಿಸಲು ಮೊಬಲಗು ರೂ.15,00,000/- ರೂಪಾಯಿಗಳಿಗೆ ಶುದ್ದ ಕ್ರಯಕ್ಕೆ ಮಾರಾಟ ಮಾಡಲು ಒಪ್ಪಿ ಕ್ರಯದ ಮೊಬಲಗಿನ ಪೈಕಿ ದಿನಾಂಕ 20-08-2025 ರಂದು ವಾದಿಯು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗುರುಪುರ ಶಾಖೆ, ಹುಣಸೂರು -571105,ಇಲ್ಲಿನ ಚೆಕ್ ನಂ. 903694 ನ ಮೂಲಕ ರೂ. 14,00,000/-ಗಳನ್ನು ಪ್ರತಿವಾದಿಯು ಸಾಕ್ಷಿದಾರರ ಸಮಕ್ಷಮ ಕ್ರಯದ ಕರಾರಿನ ಮುಂಗಡ ಹಣವಾಗಿ ಪಡೆದುಕೊಂಡಿರುತ್ತಾರೆ. ಸದರಿ ಕ್ರಯದ ಕರಾರಿನ ಅವಧಿ ಎರಡು(02) ತಿಂಗಳ ಒಳಗಾಗಿ ಪೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದುಕೊಂಡು ನೋಂದಣಿ ಮಾಡಿಕೊಡುತ್ತೇನೆಂದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ವಾದಿಗೆ ಕ್ರಯದ ಕರಾರಿನಂತೆ ಕ್ರಯಪತ್ರವನ್ನು ಪ್ರತಿವಾದಿಯು ಬರೆದುಕೊಡದ ಕಾರಣ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ.

ಈಗ ವಾದಿ ಮತ್ತು ಪ್ರತಿವಾದಿಯು ರಾಜೀ ಮಾಡಿಕೊಂಡಿದ್ದು, ಕ್ರಯದ ಬಾಬು ಉಳಿಕೆ ರೂ. 1,00,000/- ರೂಗಳನ್ನು ವಾದಿಯಿಂದ ಪ್ರತಿವಾದಿಯು ಈ ದಿನ ಘನ ನ್ಯಾಯಾಲಯದಲ್ಲಿ ನಗದು ರೂಪದಲ್ಲಿ ಪಡೆದುಕೊಂಡಿರುತ್ತಾರೆ. ಇನ್ನು ಕ್ರಯದ ಬಾಬ್ತು ಯಾವುದೇ ವಾದಿಯಿಂದ ಮೊಬಲಗು ಪ್ರತಿವಾದಿಗೆ ಬರಬೇಕಾಗಿರುವುದಿಲ್ಲ ಎಂದು ಪ್ರತಿವಾದಿಯು ಒಪ್ಪಿಕೊಂಡಿರುತ್ತಾರೆ. ವಾದಿಯು ದಾವೆಯಲ್ಲಿ ಕೇಳಿರುವಂತೆ ವಾದಿಯ ಪರವಾಗಿ ಪ್ರತಿವಾದಿಯು ಒಪ್ಪಿರುತ್ತಾರೆ. ಡಿಕ್ರಿಯನ್ನು ಮಾಡಲು

ದಾವಾ ಬೇಕಾಗಿರುವ ಎಲ್ಲಾ ನೋಂದಣಿಗೆ ಷೆಡ್ಯೂಲ್ ಸ್ವತ್ತಿನ ದಾಖಲಾತಿಗಳನ್ನು ಪಡೆದುಕೊಂಡು ಎರಡು (02) ತಿಂಗಳ ಒಳಗಾಗಿ ದಾವಾ ಸ್ವತ್ತಿನ ಕ್ರಯಪತ್ರವನ್ನು ಮಾಡಿಕೊಡುವುದಾಗಿ ಪ್ರತಿವಾದಿಯು ಒಪ್ಪಿಕೊಂಡಿರುತ್ತಾರೆ. ತಪ್ಪಿದಲ್ಲಿ ವಾದಿಯು ನ್ಯಾಯಾಲಯದ ಡಿಕ್ರಿ ಆದೇಶದಂತೆ ಪ್ರತಿವಾದಿಯ ವಿರುದ್ಧ ಜಾರಿ ಪ್ರಕರಣವನ್ನು ಸಲ್ಲಿಸಿ

ನ್ಯಾಯಾಲಯದ ಮುಖಾಂತರ ಕ್ರಯಪತ್ರವನ್ನು ಮಾಡಿಸಿಕೊಳ್ಳಲು ಕಾನೂನು ರೀತ್ಯಾ ಹಕ್ಕುಳ್ಳವರಾಗಿರುತ್ತಾರೆ ಹಾಗೂ ದಾವಾ ಸ್ವತ್ತಿನ ಸ್ವಾಧೀನವನ್ನು ಇಂದೇ ಪ್ರತಿವಾದಿಯು ವಾದಿಗೆ ಬಿಟ್ಟುಕೊಟ್ಟಿರುತ್ತಾರೆ.

ವಾದಿಯು ನ್ಯಾಯಾಲಯಕ್ಕೆ ಜಮಾ ಮಾಡಿರುವ ಪೂರ್ತಾ ನ್ಯಾಯಾಲಯದ ಶುಲ್ಕವನ್ನು ವಾದಿಗೆ ಹಿಂತಿರುಗಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತಾರೆ.

ಆದ್ದರಿಂದ ವಾದಿ ಮತ್ತು ಪ್ರತಿವಾದಿಯು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ಈ ರಾಜಿ ಅರ್ಜಿಯನ್ನು ಪುರಸ್ಕರಿಸಿ ದಾವೆಯಲ್ಲಿ ಕೇಳಿರುವಂತೆ ಡಿಕ್ರಿ ಮಾಡಬೇಕೆಂದು ನ್ಯಾಯ ಮತ್ತು ಸಮಾನತೆ ದೃಷ್ಠಿಯಿಂದ ಪ್ರಾರ್ಥಿಸಿಕೊಳ್ಳುತ್ತಾರೆ.

ವಾದಿ ಮತ್ತು ಪ್ರತಿವಾದಿಯು ಅರ್ಜಿಯನ್ನು ಓದಿ, ಕೇಳಿ, ತಿಳಿದುಕೊಂಡು ಸರಿಯಾಗಿದೆ ಎಂದು ಒಪ್ಪಿ ಸಹಿ ಮಾಡಿರುತ್ತಾರೆ.

ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಕಸಬಾ ಹೋಬಳಿ, ಮುಷ್ಕರೆ ಗ್ರಾಮದ ಸರ್ವೆ ನಂಬರ್ ಐವತ್ತು (50) ರ ಒಟ್ಟು ವಿಸ್ತೀರ್ಣ 1171.28 ಎಕರೆವುಳ್ಳ ಜಮೀನಿನ ಪೈಕಿ ಷಣ್ಮುಗಸ್ವಾಮಿ @ ಷಣ್ಮುಖಸ್ವಾಮಿ ಎಸ್.ಸಿ ರವರ ಹೆಸರಿನಲ್ಲಿ ಖಾತೆ ಇರುವ 2-00 ಎಕರೆ ಜಮೀನಿಗೆ ಚಕ್ಕುಬಂದಿ.

| | | |
|---|---|---|
| ಪೂರ್ವಕ್ಕೆ | : | ಪದ್ಮನಾಭರವರ ಜಮೀನು |
| ಪಶ್ಚಿಮಕ್ಕೆ | : | ಚಂದ್ರಚಾರ್‌ರವರ ಜಮೀನು |
| ಉತ್ತರಕ್ಕೆ | : | ರಸ್ತೆ ಮತ್ತು ಕೆಂಡಗಣ್ಣಚಾರ್‌ರವರ ಜಮೀನು |
| ದಕ್ಷಿಣಕ್ಕೆ | : | ರವಳಯ್ಯರವರ ಜಮೀನು |

And it is further ordered that, the compromise petition filed by the parties is part and parcel of the compromise decree.

And it is further ordered that, office is directed to return the Court Fee to the plaintiff.

Given under my hand and seal of this Court on the 14th day of March, 2026.

SENIOR CIVIL JUDGE & JMFC
H.D.KOTE.

**MEMORANDUM OF COST INCURRED IN THE SUIT**

| | **Plaintiff/s** | **Defendant/s** |
|---|---|---|
| 1. Court fee on Plaint | 87125-00 | -- |
| 2. Service of Process | 10-00 | -- |
| 3. Advocate fee | -- | -- |
| **TOTAL** | **87135-00** | **--** |

SENIOR CIVIL JUDGE & JMFC
H.D.KOTE.